(13)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಯಲಹಂಕ ವಲಯ

ಸಂಖ್ಯೆ:ಬಿಬಿಎಂಪಿ/ಅ.ಅ/ಯ.ವ/ತಾ.ಮ್ಂ/36/11-12

ಅಧೀಕ್ಷಕ ಅಭಿಯಂತರರ ಕಛೇರಿ
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬಳ್ಳಾರಿ ರಸ್ತೆ, ಬೆಂಗಳೂರು-92.
ದಿನಾಂಕ: 21-03-2011

**ತಾಂತ್ರಿಕ ಮಂಜೂರಾತಿ**

**ವಿಷಯ:-** Metalting and Asphalting to roads in Venkatagiriyappa Layout in Ward No.10, Doddabommasandra, Vidyaranyapura Sub Division. Est.Amount:14.90 Lakhs.

**ಉಲ್ಲೇಖ:-**1. ಮುಖ್ಯ ಲೆಕ್ಕಾಧಿಕಾರಿ ರವರ ಕಛೇರಿ ಕಾಮಗಾರಿ ಸಂಕೇತ: **010-11-000060**
2. ಉಪ ಆಯುಕ್ತರು ಯಲಹಂಕ ವಲಯರವರ ಕಛೇರಿ ಕಾಮಗಾರಿಯ ಉ.ಆ/ಯ.ವ/ಆ.ಆ/88/11.12, ದಿ: 11.07.2011.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ವಿಭಾಗ ರವರು 2010-11ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ ಎಸ್.ಆರ್. ದರ ಪಟ್ಟಿಯನ್ವಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯಕ್ಕೆ 2010-11ನೇ POW Works ಯೋಜನೆಯಡಿಯಲ್ಲಿ ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ರೂ:14.90 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಉಲ್ಲೇಖ (1)ರಂತೆ ಕಾಮಗಾರಿ ಸಂಕೇತ ಹಾಗೂ ಉಲ್ಲೇಖ (2) ರಂತೆ ಉಪ ಆಯುಕ್ತರು (ಯಲಹಂಕ) ರವರು ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ವಿ.ಆ/ಯೋಜನೆ/ಪಿ.ಆರ್/3008/09-10 ದಿನಾಂಕ:25.01.2010 ರಂತೆ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಕೆಳಗಿನ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಹಾಗೂ ತಾಂತ್ರಿಕ ಮಂಜೂರಾತಿ ಪುಸ್ತಕದ **ಪುಟ ಸಂಖ್ಯೆ:** 60 **ಕ್ರಮ ಸಂಖ್ಯೆ:** 36 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

**ಷರತ್ತುಗಳು:**

01. ಅಂದಾಜು ಪಟ್ಟಿಯಮೊತ್ತ ರೂ.2.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
02. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History Book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ಧ ಗೊಳಿಸುವುದು.
03. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡ್ಯಾಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
04. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಆಳವಡಿಸಿಕೊಂಡಿರುವ ಅಂಶಗಳಿಗೆ ಕೋಟೇಷನ್ ಕರೆದು ಅನುಮೋದನೆ ಪಡೆಯುವುದು.
05. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
06. ಆರ್.ಸಿ.ಸಿ. ಡೆಕ್ ಸ್ಲಾಬ್, ಹರಿನೀರು ಮೋರಿಯ ಅಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
07. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನಡಿಯಲ್ಲಿ ಭರಿಸುವುದು.
08. ಬಿ.ಎಂ./ಬಿ.ಸಿ ಆಳವಡಿಸಿ ಕೊಂಡಿರುವ ರಸ್ತೆಗಳಿಗೆ ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಟಿ.ವಿ.ಸಿ.ಸಿರವರಿಗೆ ಸಲ್ಲಿಸಿ ಪರಿಶೀಲಿಸಿ ನಂತರ ಸದರಿ ಕಾಮಗಾರಿಯನ್ನು ಪ್ರಾರಂಭಿಸಬೇಕು.
09. ಸದರಿ ಕೆಲಸವು ಎಂಬ್ಯಾಕ್‌ಮೆಂಟ್/ಕಾಂಕೀಟ್/ಡಾಂಬರೀಕರಣ-ಬಿಎಂ-ಬಿಸಿ/WMM/WBM ಕಾಮಗಾರಿಗಳಾಗಿದ್ದಲ್ಲಿ, MORT & H ನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದು ಕೊಳ್ಳುವುದು.

ಅಧೀಕ್ಷಕ ಅಭಿಯಂತರರು
ಯಲಹಂಕ ವಲಯ.

**ಪ್ರತಿಯನ್ನು:**

01. ಜಂಟಿ ಆಯುಕ್ತರು ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ,
02. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ,
03. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ರವರ ಮಾಹಿತಿಗಾಗಿ,
04. ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ ರವರ ಮಾಹಿತಿಗಾಗಿ.